ಓ.ಎಸ್.ನಂ.**221/2022**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **06.08.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ ವಿ.ಆರ್. ವಕೀಲರಿಂದ**

ನನಗೆ ಈಗ **24** ವರ್ಷ. ನನ್ನ ವಯಸ್ಸಿಗೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಬಿ.ಎ. ಪದವಿಧರ. ನನಗೆ ಇಂಗ್ಲೀಷ್ ಮತ್ತು ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ನನ್ನ ಸಹಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮಾಡುತ್ತೇನೆ. ನಾನು ಕಂಪ್ಯೂಟರ್ ಟೈಪಿಂಗ್ ಅಂಗಡಿಗೆ ಕೆಲಸಕ್ಕೆ ಹೋಗುತ್ತಿದ್ದೇನೆ. ನಾನು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆ. ನಾನು ಕಳೆದ ವರ್ಷ ಮದುವೆಯಾದ ನಂತರ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇನೆ.

ಐಟಂ ನಂ.**2** ರ ಆಸ್ತಿಯನ್ನು ನನ್ನ ತಾತನವರು ಖರೀದಿ ಮಾಡಿದ್ದಾರೆ.ನನ್ನ ತಂದೆ ಮತ್ತು ದೊಡ್ಡಪ್ಪನ ನಡುವೆ **2008–09**ನೇ ಸಾಲಿನಲ್ಲಿ ವಿಭಾಗವಾದಾಗ ಸದರಿ ಆಸ್ತಿಯು ನನ್ನ ತಂದೆಯ ಭಾಗಕ್ಕೆ ಬಂದಿರುತ್ತದೆ. ಸದರಿ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ಈ ಕೇಸನ್ನು ಹಾಕುವ ಆರು ತಿಂಗಳ ಮೊದಲು ತಿಳಿದಿರುತ್ತದೆ. ದಾವಾ ಐಟಂ ನಂ.**2** ನ್ನು ಹೊರತುಪಡಿಸಿ ಬೇರೆ ಕುಟುಂಬದ ಅಸ್ತಿಗಳನ್ನು ಮಾರಾಟ ಮಾಡಿದ್ದಾರಾ ಎಂದರೆ ಹೌದು. ಐಟಂ ನಂ.**2** ರ ಆಸ್ತಿಯನ್ನು ನನ್ನ ಕುಟುಂಬದವರು **2012** ರಲ್ಲಿ ಮಾರಾಟ ಮಾಡಿರುತ್ತಾರೆ. ಆಗ ನನಗೆ **14–15** ವರ್ಷ ವಯಸ್ಸಾಗಿತ್ತು. ಸದರಿ ಆಸ್ತಿಯನ್ನು ನಮ್ಮ ವಿದ್ಯಾಭ್ಯಾಸ ಹಾಗೂ ಕುಟುಂಬದ ಪೋಷಣೆಗಾಗಿ ಮತ್ತು ಕೈ ಸಾಲ ತೀರಿಸಲು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗ ಬೇರೆ ಯಾವುದೇ ಆಧಾರವಿಲ್ಲ ಹಾಗಾಗಿ ನನಗೆ ಭಾಗಬೇಕೆಂದು ಈ ಕೇಸನ್ನು ಹಾಕಿದ್ದೇನೆ. ದಾವಾ ಐಟಂ ನಂ.**2** ರ ಸ್ವಾಧೀನವನ್ನು ನಾವು ಹೊಂದಿಲ್ಲ. ಕ್ರಯ ಆದ ನಂತರ

ಖರೀದಿದಾರರು ಸ್ವಾಧೀನ ಹೊಂದಿದ್ದಾರೆ. ನಾನು ಸದರಿ ಆಸ್ತಿಯಲ್ಲಿ ಸ್ವಾಧೀನ ಹೊಂದದೇ ಇರುವ ಕಾರಣ ಸದರಿ ಸ್ವಾಧೀನವನ್ನು ಪಡೆಯಲು ನ್ಯಾಯಾಲಯಕ್ಕೆ ಸರಿಯಾದ ಶುಲ್ಕವನ್ನು ಪಾವತಿಸಿಲ್ಲ ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ಕುಟುಂಬದವರು ಶಾಮೀಲಾಗಿ ಅಕ್ರಮ ಲಾಭ ಪಡೆಯಲು ಈ ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ 1 ರಿಂದ 3ನೇ ಪ್ರತಿವಾದಿಗಳು ಏಕಪಕ್ಷೀಯವಾಗಿದ್ದು, 4ನೇ ಪ್ರತಿವಾದಿ ಪರ ವಕೀಲರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿ ಪ್ರತಿವಾದಿಗಳ ಪರ ವಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.